ದಿನಾಂಕ **03.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯರ ಪರ ವಕೀಲರಿಂದಃ

1. ದಿಃ 18.05.1992 ರ ಕ್ರಯಪತ್ರದ ಮೂಲ ಪ್ರತಿಯನ್ನು ನಿಡಿ 8 ಎಂದು ಗುರುತಿಸಲಾಯಿತು.

ಪಾಟಿ ಸವಾಲು ಃ ವಾದಿ ಪರ ವಕೀಲರಿಂದ

ನನ್ನ ತಾಯಿ ಆಸ್ತಿಯನ್ನು ಖರೀದಿಸುವ ಮೊದಲೇ ನನ್ನ ಅಜ್ಜ ಕಾಳಪ್ಪ ಪೌತಿ ಆದ ಕಾರಣ ಅವುಗಳು ನನ್ನ ತಾಯಿಯ ಹೆಸರಿಗೆ ಬಂದಿದ್ದವು ಎಂದರೆ ಸರಿ. 1990 ರ ನಂತರ ಡಿ ಕಾಳೇನಹಳ್ಳಿ ನೀರಾವರಿ ಗ್ರಾಮ ಆಗಿರುತ್ತದೆ . ನನ್ನ ಅಜ್ಜ ಕಾಳಪ್ಪ ತೀರಿಕೊಂಡ ನಂತರ ಮನೆಯ ವ್ಯವಹಾರವನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಿಡಿ 8 ರಲ್ಲಿರುವ ಜಮೀನನ್ನು ನನ್ನ ತಾಯಿ ಕುಟುಂಬದ ಆದಾಯದಿಂದ ಖರೀದಿಸಿದ್ದರು ಎಂದರೆ ಸರಿಯಲ್ಲ. ನಿಡಿ 8 ರ ಆಸ್ತಿಯನ್ನು ಖರೀದಿಸುವ ಮೊದಲು ನನ್ನ ತಾಯಿ ಮೇಲಾಧಿಕಾರಿಯಿಂದ ಯಾವುದೇ ಅನುಮತಿಯನ್ನು ಪಡೆದಿಲ್ಲ. ನನ್ನ ತಾಯಿ ಆ ಆಸ್ತಿಯನ್ನು ಘೋಷಣೆ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ನಿಡಿ 8 ರ ಆಸ್ತಿ ಕುಟುಂಬದ ಪರವಾಗಿ ಕುಟುಂಬದ ಯಜಮಾನಿಯಾಗಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.